# ಹಣ ತರಲು ಹೇಳಿದ ರಾಯರು

ನನ್ನ ಮಕ್ಕಿಗೆ ಇನ್ನೂ ಒಳ್ಳೆ ರೀತಿಯ ಜೀವನ ಒದಗಿಸಬಹುದಿತ್ತು ಎಂದು ನನಗೆ ಪ್ರತಿ ಕ್ಷಣ ಅನಿಸುತ್ತೆ. ವಿದ್ಯೆ, ಆರ್ಥಿಕ ಸ್ವಾವಲಂಬನೆಯ ಅನಿವಾರ್ಯತೆ ಈಗ ಹೆಣ್ಮಕ್ಕಿಗೆ ಎಷ್ಟು ಅಗತ್ಯ ಇದೆ ಎನ್ನುವುದರ ಅರಿವು ನನಗೆ ಚೆನ್ನಾಗಿ ಅರಿವಿದ್ದೇ, ನಿನಗಾಗಿ ಅದನ್ನು ಕಲ್ಪಿಸಿದ್ದೇನೆ. ನಿನ್ನ ಯಾವ ಜನ್ಮದ ಸುಕೃತದ ಫಲವೋ, ನಿನ್ನನ್ನು ಕಲಿಸಲು ಈ ದಂಪತಿ, ಒಪ್ಪಿದರು. ಅದನ್ನು ಕಳ್ಕೋಬೇಡಾ. ನಿನ್ನ ಮದ್ವೆ ಮಾಡಿ ಕೊಡೋ ಶಕ್ತಿ ನನಗಿಲ್ಲ. ನಿನ್ಗೆ ಕೆಲಸ ಅಂತಾದ್ರೆ, ನಿನ ಅನ್ನ ನೀನು ಸಂಪಾದಿಸ ತೊಡಗಿದ್ರೆ ಆಮೇಲೆ ನಿನ್ನ ಬದುಕು ನಿನ್ಗೆ. ನನ್ನ ಅಕ್ಕ ಭಾವಂಗೂ ತಮ್ಮ ಮಗ್ಳು ಸುಖವಾಗಿದ್ದಾಳೆ ಅನ್ನೋ ಸಮಾಧಾನ ಸಿಗಲಿ' ಹೆತ್ತವರ ಪ್ರಸ್ತಾಪ ಬರುತ್ತಲೂ ಅಪೂರ್ವಳ ಬಾಯಿ ಕಟ್ಟಿತು. ಮನಸ್ಸು ಖಿನ್ನವಾಯಿತು. ತಾಯಿಯ ಮುಖವನ್ನು ನೋಡಿದ ನೆನಪು ಕಿಂಚಿತ್ತೂ ಇಲ್ಲ. ಆದರೆ ಅಪ್ಪನ ಮುಖ ಅಸ್ಪಷ್ಟವಾಗಿ ಗೊತ್ತು. ತಾನು

